ಕನ್ನಡಪ್ರಭ
ಶನಿವಾರ 30.05.2026

## ಸುದ್ದಿ ಸಿಂಚನ

### ಇಂದು 'ಸುಹಾನಾ ಸಫರ್, ಬಿನಾಕಾ ಗೀತ್ ಮಾಲಾ' ಕಾರ್ಯಕ್ರಮ

**ಮಂಗಳೂರು:** ಲಯನ್ಸ್ ಪ್ರಕೋಷ್ಠ ಹಾಗೂ ಲಯನ್ಸ್ ಜಿಲ್ಲೆ 317 ಡಿ. ವತಿಯಿಂದ ಲಯನ್ಸ್ ಕ್ಲಬ್ ಮಂಗಳೂರು ಸಹಯೋಗದೊಂದಿಗೆ 'ಸುಹಾನಾ ಸಫರ್ ಮತ್ತು ಬಿನಾಕಾ ಗೀತ್ ಮಾಲಾ' ಕಾರ್ಯಕ್ರಮ ಮೇ 30ರಂದು ಸಂಜೆ 5ರಿಂದ ರಾತ್ರಿ 8.45ರ ವರೆಗೆ ನಗರದ ಕದ್ರಿ, ಸುಜೀರ್ ಸಿ.ವಿ. ನಾಯಕ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಲಯನ್ಸ್ ಪ್ರಕೋಷ್ಠ ಜಿಲ್ಲಾ ಅಧ್ಯಕ್ಷ ಕುಂಬ್ಳೆ ನರಸಿಂಹ ಪ್ರಭು ತಿಳಿಸಿದರು. ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸಂಜೆ 5ಕ್ಕೆ ದಾಯ್ಜಿವರ್ಲ್ಡ್ ಸಂಪಾದಕ ವಾಲ್ಟರ್ ನಂದಳಿಕೆ ಕಾರ್ಯಕ್ರಮ ಉದ್ಘಾಟಿಸುವರು. ಲಯನ್ಸ್ ಜಿಲ್ಲೆ 317 ಡಿ ಚುನಾಯಿತ ಪ್ರಥಮ ಉಪ ಜಿಲ್ಲಾ ಗವರ್ನರ್ ಎಂ.ಗೋವರ್ಧನ್ ಶೆಟ್ಟಿ, ಉದ್ಯಮಿ ಗಿರಿಧರ್ ಪ್ರಭು, ಯೆನೆಪೋಯ ಮೆಡಿಕಲ್ ಕಾಲೇಜು ಪ್ರಾಧ್ಯಾಪಕ ಡಾ. ಕುಂಬ್ಳೆ ಅನಂತ ಪ್ರಭು, ಪ್ರಸಾದ್ ನೇತ್ರಾಲಯ ವೈದ್ಯಕೀಯ ನಿರ್ದೇಶಕ ಡಾ. ಕೃಷ್ಣ ಪ್ರಸಾದ್ ಕೂಡ್ಲು, ಮಂಗಳೂರಿನ ಜಿಎಸ್‌ಬಿ ಸೇವಾ ಸಂಘ ಅಧ್ಯಕ್ಷ ಡಾ. ಕೆ. ಮೋಹನ್ ಪೈ, ಪ್ರಮುಖರಾದ ರಾಘವೇಂದ್ರ ಕುಡ್ವ, ಕುಂಬ್ಳೆ ವಿಘ್ನೇಶ್ ಪ್ರಭು ಭಾಗವಹಿಸುವರು.

ಸುಹಾನಾ ಸಫರ್ ಹಳೆಯ ಹಿಂದಿ ಸಿನೆಮಾ ಹಾಡುಗಳ ಸಂಗೀತ ಕಾರ್ಯಕ್ರಮವಾಗಿದೆ. ಬಿನಾಕಾ ಗೀತ್ ಮಾಲಾ ರೇಡಿಯೋ ಸಿಲೋನ್‌ನಲ್ಲಿ ಪ್ರಸಾರವಾಗುತ್ತಿದ್ದ ಪ್ರಸಿದ್ಧ ಸಂಗೀತ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ 22 ಹಾಡುಗಳನ್ನು ಡಾ. ಕುಂಬ್ಳೆ ಅನಂತ ಪ್ರಭು, ಮಾಲಿನಿ ಕೇಶವ ಪ್ರಸಾದ್ ಅವರು ಇತರ ಪ್ರತಿಭಾವಂತ ಗಾಯಕರ ಜತೆ ಹಾಡಲಿದ್ದಾರೆ. ಈ ಸಂದರ್ಭ 100 ವರ್ಷಗಳನ್ನು ಪೂರೈಸಿದ ಸಿಟಿ ಬೇಕರಿ ಸಂಸ್ಥೆಯನ್ನು ಗೌರವಿಸಲಾಗುವುದು. ಕಾರ್ಯಕ್ರಮಕ್ಕೆ ಪಾಸ್ ಮೂಲಕ ಪ್ರವೇಶವಿದೆ ಎಂದರು. ಲಯನ್ಸ್ ಕ್ಲಬ್ ಮಂಗಳೂರು ಅಧ್ಯಕ್ಷ ಎಂ. ರಾಜೇಶ್ ಕಾಮತ್, ವೆಂಕಟೇಶ್ ಬಾಳಿಗಾ ಈ ಸಂದರ್ಭ ಹಾಜರಿದ್ದರು.

# ಮಾಳ-ತನಿಕೋಡು ರಸ್ತೆ ಅಭಿವೃದ್ಧಿ: ಉಡುಪಿ ಸಂಸದ ಕೋಟ ಪರಿಶೀಲನೆ

## 29 ಕಿ.ಮೀ. ಹೆದ್ದಾರಿ ಅಭಿವೃದ್ಧಿ ಸಂಬಂಧ ಅಧಿಕಾರಿಗಳೊಂದಿಗೆ ಸಮಾಲೋಚನೆ



ಮಾಳ-ತನಿಕೋಡು ಗೇಟ್ ರಸ್ತೆಯನ್ನು ಅಭಿವೃದ್ಧಿಪಡಿಸಲು ಸಂಸದ ಕೋಟ ಸ್ಥಳ ಪರಿಶೀಲನೆ ಮಾಡಿದರು.

• **ಕನ್ನಡಪ್ರಭ ವಾರ್ತೆ ಕಾರ್ಕಳ**

ಇಲ್ಲಿನ ಮಾಳ ಗೇಟ್‌ನಿಂದ ಎಸ್.ಕೆ. ಬಾರ್ಡರ್‌ಮೂಲಕ ಶೃಂಗೇರಿಯ ತನಿಕೋಡು ಗೇಟ್‌ವರೆಗಿನ 29 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿ ಕುರಿತು ಸಂಬಂಧಿತ ಅಧಿಕಾರಿಗಳೊಂದಿಗೆ ಶುಕ್ರವಾರ ಉಡುಪಿ-ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಚರ್ಚೆ ನಡೆಸಿದರು.

ಈ ಹೆದ್ದಾರಿ ಅಭಿವೃದ್ಧಿಗೆ ಸುಮಾರು 550 ಕೋಟಿ ರು. ವೆಚ್ಚದ ಪ್ರಸ್ತಾವನೆ ಕೇಂದ್ರ ಸರ್ಕಾರದ ಮುಂದಿದ್ದು, ಕಾಮಗಾರಿಗೆ ಅಗತ್ಯವಿರುವ ಅರಣ್ಯ ಭೂಮಿ ಸಂಬಂಧಿತ ಪ್ರಕ್ರಿಯೆಗಳು ಪ್ರಗತಿಯಲ್ಲಿವೆ. ಮಾಳ ಗೇಟ್ ಆರಂಭದಿಂದ ರಸ್ತೆ ಇಕ್ಕೆಲಗಳಲ್ಲಿ ಬರುವ ಅರಣ್ಯ ತೆರವುಗೊಳಿಸಲು ಕಂದಾಯ ಇಲಾಖೆ ಮೂಲಕ ಅರಣ್ಯ ಇಲಾಖೆಗೆ ಸುಮಾರು 50 ಎಕರೆ ಜಾಗವನ್ನು ವರ್ಗಾಯಿಸಬೇಕಾಗಿದೆ. ಈ ಸಂಬಂಧ ಕಡತ ವಿಲೇವಾರಿಗಾಗಿ ಶನಿವಾರ ಶಿವಮೊಗ್ಗ ಜಿಲ್ಲಾಧಿಕಾರಿ ಅವರನ್ನು ಭೇಟಿ ಮಾಡಲು ಸಮಯ ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.

ಇದೇ ವೇಳೆ ಇಲಾಖೆ ಮಾಹಿತಿ ಪ್ರಕಾರ ಹಿಂದೆ ಗುಲಗುಂಜಿ ಮನೆ, ಕೊರ್ಕನಹಳ್ಳಿ ಸೇರಿದಂತೆ ಮೂರು ಸೇತುವೆಗಳು ಮಂಜೂರಾಗಿದ್ದರೂ ಅರಣ್ಯ ಇಲಾಖೆ ಅನುಮತಿ ಸಿಗದ ಕಾರಣ ಕಾಮಗಾರಿ ರದ್ದಾಗಿತ್ತು. ಇದೀಗ ಅಗತ್ಯ ಅನುಮತಿ ದೊರಕುವ ನಿರೀಕ್ಷೆಯಲ್ಲಿ ರಸ್ತೆ ಇಕ್ಕೆಲಗಳಲ್ಲಿ ಗಡಿ ಗುರುತು ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಮತ್ತು ಕಂದಾಯ ಇಲಾಖೆ ಪ್ರಸ್ತಾಪಿತ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿದರೆ 1999ರಿಂದ ಅಂದರೆ ಸುಮಾರು 25 ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಮಾಳ-ತನಿಕೋಡು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಶೀಘ್ರ ಚಾಲನೆ ಸಿಗಲಿದೆ ಎಂದು ಸಂಸದ ಕೋಟ ವಿಶ್ವಾಸ ವ್ಯಕ್ತಪಡಿಸಿದರು.

ರಾ.ಹೆ. ಇಲಾಖೆಯ ನವೀನ್ ರಾಜ್, ಅರಣ್ಯ ಇಲಾಖೆಯ ಅರುಣ್, ಸತೀಶ್ ನಾಯಕ್, ಸುಬ್ರಹ್ಮಣ್ಯ ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

■ ಈ ಹೆದ್ದಾರಿ ಅಭಿವೃದ್ಧಿಗೆ ಸುಮಾರು 550 ಕೋಟಿ ರು. ವೆಚ್ಚದ ಪ್ರಸ್ತಾವನೆ ಕೇಂದ್ರ ಸರ್ಕಾರದ ಮುಂದಿದ್ದು, ಕಾಮಗಾರಿಗೆ ಅಗತ್ಯವಿರುವ ಅರಣ್ಯ ಭೂಮಿ ಸಂಬಂಧಿತ ಪ್ರಕ್ರಿಯೆಗಳು ಪ್ರಗತಿಯಲ್ಲಿವೆ. ಮಾಳ ಗೇಟ್ ಆರಂಭದಿಂದ ರಸ್ತೆ ಇಕ್ಕೆಲಗಳಲ್ಲಿ ಬರುವ ಅರಣ್ಯ ತೆರವುಗೊಳಿಸಲು ಕಂದಾಯ ಇಲಾಖೆ ಮೂಲಕ ಅರಣ್ಯ ಇಲಾಖೆಗೆ ಸುಮಾರು 50 ಎಕರೆ ಜಾಗವನ್ನು ವರ್ಗಾಯಿಸಬೇಕಾಗಿದೆ. ಈ ಸಂಬಂಧ ಕಡತ ವಿಲೇವಾರಿಗಾಗಿ ಶನಿವಾರ ಶಿವಮೊಗ್ಗ ಜಿಲ್ಲಾಧಿಕಾರಿ ಅವರನ್ನು ಭೇಟಿ ಮಾಡಲು ಸಮಯ ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.

# ಜಾಹೀರಾತು ಫಲಕ ಅಳವಡಿಸಲು ತಂತ್ರಾಂಶ

## ತಂತ್ರಾಂಶ ಮೂಲಕ ಅರ್ಜಿ ಸಲ್ಲಿಸಲು ಸಾರ್ವಜನಿಕರಿಗೆ ಮ.ನಾ.ಪ. ಅವಕಾಶ

• **ಕನ್ನಡಪ್ರಭ ವಾರ್ತೆ ಮಂಗಳೂರು**

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಾಹಿರಾತು ಫಲಕ ಅಳವಡಿಸಲು ಹಾಗೂ ನವೀಕರಿಸಲು ಹೊಸ ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದ್ದು, ಅದರ ಅನಾವರಣ ಕಾರ್ಯಕ್ರಮ ಸೋಮವಾರ ಮಂಗಳೂರು ಮನಪಾ ಕಚೇರಿಯ ಆಯುಕ್ತರ ಸಭಾ ಕೊಠಡಿಯಲ್ಲಿ ನಡೆಯಿತು.

ಪಾಲಿಕೆ ಕಮಿಷನರ್‌ರವಿಚಂದ್ರ ನಾಯಕ್ ಮಾತನಾಡಿ, ಪಾಲಿಕೆಯಿಂದ ತೆರಿಗೆ ಸೇರಿದಂತೆ ನಾನಾ ವ್ಯವಸ್ಥೆಗಳನ್ನು ಆನ್‌ಲೈನ್‌ಗೆ ತರಲಾಗಿದ್ದು, ಇದೀಗ ಜಾಹಿರಾತು ತಂತ್ರಾಂಶಕೂಡಾಅಭಿವೃದ್ಧಿಗೊಳಿಸಲಾಗಿದೆ. ಹೊಸದಾಗಿ ಅರ್ಜಿ ನೀಡಲು ಮತ್ತು ಅವಧಿ ಮುಗಿದಿರುವ ಫಲಕಗಳ ಪರವನಾಗಿ ನವೀಕರಿಸಲು ಹಾಗೂ ಪರವಾನಗಿ ರದ್ದು ಮಾಡಲು ಅವಕಾಶ ಕಲ್ಪಿಸಲಾಗಿದೆ. ಜಾಹೀರಾತು ಫಲಕ ನವೀಕರಣಕ್ಕೆ ಅಗತ್ಯವಿರುವ ದಾಖಲೆಗಳನ್ನು ಆನ್‌ಲೈನ್ ಮೂಲಕ ನೀಡಿ ಕಂದಾಯ ವಿಭಾಗದ ಕಂದಾಯ ನಿರೀಕ್ಷಕರ ಮೂಲಕ ಸ್ಥಳ ಪರಿಶೀಲನೆ ನಡೆಸಿ ಮೇಲಾಧಿಕಾರಿಗಳ ಆದೇಶವಾದ ನಂತರ ಜಾಹೀರಾತು ಫಲಕದ ಅನುಮತಿ ನೀಡಲಾಗುವುದು ಎಂದರು.



ಆನ್‌ಲೈನ್ ತಂತ್ರಾಂಶದಲ್ಲಿ ಪರವಾನಿಗೆ ಶುಲ್ಕ ಮೊತ್ತವನ್ನು ಆನ್‌ಲೈನ್/ನೆಟ್ ಬ್ಯಾಂಕಿಂಗ್ ಯುಪಿಐ ಮೂಲಕ ಮತ್ತು ಆಫ್‌ಲೈನ್ ಮೂಲಕ ಪಾವತಿಸಲು ಸರಳ ವಿಧಾನಗಳನ್ನು ಅಳವಡಿಸಲಾಗಿದೆ. ಈ ತಂತ್ರಾಂಶದಲ್ಲಿ ಮುಂಬರುವ ಜಾಹೀರಾತು ಫಲಕ ನವೀಕರಣ ಶುಲ್ಕದ ಪಾವತಿಯ ಸಂದೇಶಗಳನ್ನು ಎಸ್‌ಎಂಎಸ್ ಮೂಲಕ ತಿಳಿಸಲು ಅವಕಾಶವಿದೆ. ಸಾರ್ವಜನಿಕರಿಗೆ ವಿತರಿಸಲಾಗುವ ಚಲನ್‌ನಲ್ಲಿ ಹಾಗೂ ಅಳವಡಿಸಲಾದ ಜಾಹೀರಾತು ಫಲಕದಲ್ಲಿ ಕ್ಯುಆರ್‌ಕೋಡ್ ಇದ್ದು, ಸ್ಕ್ಯಾನ್ ಮಾಡಿದಾಗ ಆ ಫಲಕವು ಯಾವ ಏಜನ್ಸಿ ಅಥವಾ ವ್ಯಕ್ತಿಗೆ ಸಂಬಂಧಿಸಿದೆ ಎಂಬುವುದು ತಿಳಿಯುತ್ತದೆ.

ಸಾರ್ವಜನಿಕರು ತಂತ್ರಾಂಶ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಅದರ ಹೋರ್ಡಿಂಗ್ಸ್ ಗಾತ್ರ, ಮಾದರಿ ಇತರ ಮಾಹಿತಿಗಳನ್ನು ತುಂಬಬೇಕು. ಈ ಅರ್ಜಿಯನ್ನು ಆರ್‌ಐ (ಸ್ಥಳ ಪರಿಶೀಲನೆ) ಪರಿಷ್ಕರಿಸಿದರೆ ಬಳಿಕ ಆರ್‌ಒ ಪರಿಷ್ಕರಿಸಲಿದ್ದಾರೆ. ಇದಾದ ಬಳಿಕ ಡಿಸಿಆರ್ (ರೆವಿನ್ಯೂ ಉಪ ಆಯುಕ್ತರು) ಪರಿಶೀಲನೆ ನಡೆಸಿ ಅನುಮತಿ ನೀಡಲಿದ್ದಾರೆ. ಇದಾದ ಬಳಿಕ ಅದರ ವೆಚ್ಚವನ್ನು ಕಟ್ಟಬಹುದಾಗಿದೆ. ಅರ್ಜಿ ಹಾಕಿದ 7 ದಿನದೊಳಗೆ ಅರ್ಜಿ ಇತ್ಯರ್ಥವಾಗಲಿದೆ ಎಂದು ಕಮಿಷನರ್ ಮಾಹಿತಿ ನೀಡಿದರು. ಪಾಲಿಕೆ ಉಪಆಯುಕ್ತೆ ಅಕ್ಷತಾ ಇದ್ದರು.

■ ಆನ್‌ಲೈನ್ ತಂತ್ರಾಂಶದಲ್ಲಿ ಪರವಾನಗಿ ಶುಲ್ಕ ಮೊತ್ತವನ್ನು ಆನ್‌ಲೈನ್/ನೆಟ್ ಬ್ಯಾಂಕಿಂಗ್ ಯುಪಿಐ ಮೂಲಕ ಮತ್ತು ಆಫ್ ಲೈನ್ ಮೂಲಕ ಪಾವತಿಸಲು ವಿಧಾನ ಅಳವಡಿಸಲಾಗಿದೆ. ಈ ತಂತ್ರಾಂಶದಲ್ಲಿ ಮುಂಬರುವ ಜಾಹೀರಾತು ಫಲಕ ನವೀಕರಣ ಶುಲ್ಕ ಪಾವತಿ ಸಂದೇಶ ಎಸ್ ಎಂಎಸ್ ಮೂಲಕ ತಿಳಿಸಲು ಅವಕಾಶವಿದೆ.

# ಇದು, ನಾಳೆ 'ಮಣೆಲ್ ಗ್ರಾಮೊಡೊಂಜಿ ಚಿತ್ರ ಕೂಟೊ'

**ಮಂಗಳೂರು:** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ವತಿಯಿಂದ ಅಬ್ಬಕ್ಕ ರಾಣಿಯ ಅರಮನೆ ಇದ್ದಂತಹ ಮಣೆಲ್ ಗ್ರಾಮದಲ್ಲಿ 'ಮಣೆಲ್ ಗ್ರಾಮೊಡೊಂಜಿ ಚಿತ್ರ ಕೂಟೊ' ಕಾರ್ಯಕ್ರಮ ಮೇ 30 ಹಾಗೂ 31 ರಂದು ನಡೆಯಲಿದೆ. ಮಂಗಳೂರು ತಾಲೂಕಿನ ಗುರುಪುರ ಸಮೀಪದ ಮಣೆಲ್ ಗ್ರಾಮದ ಚಾರಿತ್ರಿಕ ಹಾಗೂ ಮಹತ್ವದ ಸ್ಥಳಗಳನ್ನು ಮತ್ತು ಗ್ರಾಮದ ಕುಲ ಕಸಬುಗಳನ್ನು ಚಿತ್ರಗಳ ಮೂಲಕ ದಾಖಲೀಕರಣ ಮಾಡುವ ಈ ಕಾರ್ಯಕ್ರಮದ ಉದ್ಘಾಟನೆ ಮೇ 30ರ ಬೆಳಗ್ಗೆ 10 ಗಂಟೆಗೆ ಮಣೆಲ್ ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನದ ಸಭಾಂಗಣದಲ್ಲಿ ನಡೆಯಲಿದೆ. ಇಂಟಾಕ್ ಮಂಗಳೂರು ವಿಭಾಗ ಹಾಗೂ ರಾಣಿ ಅಬ್ಬಕ್ಕ ಚಾವಡಿ ಮಣೆಲ್ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮವನ್ನು ಹಿರಿಯ ಚಿತ್ರ ಕಲಾವಿದ ಗಣೇಶ್ ಸೋಮಯಾಜಿ ಉದ್ಘಾಟಿಸುವರು. ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಅಧ್ಯಕ್ಷತೆ ವಹಿಸುವರು. ಇತಿಹಾಸ ತಜ್ಞ ಡಾ.ಪುಂಡಿಕಾಯ್ ಗಣಪಯ್ಯ ಭಟ್ 'ಮಣೆಲ್ ಗ್ರಾಮದಲ್ಲಿ ಅಬ್ಬಕ್ಕನ ಚರಿತ್ರೆ' ಹಾಗೂ ನಿವೃತ್ತ ಉಪನ್ಯಾಸಕ ಪ್ರೊ. ಅಕ್ಷಯ ಕುಮಾರ್ 'ಣೆಲ್ ಗ್ರಾಮದ ಸಾಮಾಜಿಕ ಸಾಂಸ್ಕೃತಿಕ ನೆಲೆಯ ಕುರಿತು ಉಪನ್ಯಾಸ ನೀಡಲಿದ್ದಾರೆ. ಚಿತ್ರ ಕೂಟದಲ್ಲಿ ಜಿಲ್ಲೆಯ 15 ಮಂದಿ ಚಿತ್ರ ಕಲಾವಿದರು ಭಾಗವಹಿಸಲಿದ್ದಾರೆ.

**MANAPPURAM FINANCE LTD.**

CIN : L65910KL1992PLC006623
Registered Office : W - 4/ 638A, Manappuram House, P.O. Valapad, Thrissur - 680 567, Kerala, India

**ಹರಾಜು ಪ್ರಕಟಣೆ**

ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/06/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 85%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ ('ನಲ್ಲಿ) ಐಟಂ ಹೆಸರಿನ ಕ್ರಮದಲ್ಲಿದೆ

ಅಡವುಗಳ ಪಟ್ಟಿ :

ದಕ್ಷಿಣ ಕನ್ನಡ, ಬಿ ಸಿ ರೋಡು ಮಂಗಳೂರು, 0101320700751120, ಮೊಹಮದ್ ಕಬೀರ್, 5000/–, ಸ್ಟಡ್ 1, 3565, ಚಂದ್ರಹಾಸ, 16034/–, ಸ್ಟಡ್ 1, 3941, ಸಂತೋಷ್, 24000/–, ಬ್ರೇಸ್ ಲೆಟ್ 1, 0101320730019800, ಸುಖೇಶ್ ನಾಯ್ಕ, 48936/–, ಚೈನ್ 1, ದಕ್ಷಿಣ ಕನ್ನಡ, ಬೆಳ್ತಂಗಡಿ, 0112550700025312, ಸೂರಜ್ ಪಿ ಎಸ್, 3000/–, ಡ್ರಾಪ್ಸ್ & ಸ್ಟಡ್ 1, 0112550730015226, ಬಿಂದುಮೋಳ್ ಕೆ ಕೆ, 10521/–, ಡ್ರಾಪ್ಸ್ & ಸ್ಟಡ್ 1, 5331, ಸಚಿನ್ ಬಿ ಸಿ, 22120/–, ಚೈನ್ 1, 6780, ವಸಂತ ಎಲ್, 60784/–, ಚೈನ್ 1, 0112550750000058, ಮೈಮುನ, 93710/–, ಬ್ರಾಡ್ ಬ್ಯಾಂಗಲ್ಸ್ 1, ದಕ್ಷಿಣ ಕನ್ನಡ, ಬೋಲಾರ ಮಂಗಳದೇವಿ, 0130040700026603, ಸಂತೋಷ್ ಕುಮಾರ್ ಶೆಟ್ಟಿ ಎಂ, 12000/–, ಸ್ಟಡ್ 1, 0130040730012208, ಅಪ್ಸಾಲಿ ಎಂ, 13976/–, ಆಂಗಲ್ ವೇರ್ 1, 2785, ಅಭಯ್ , 69495/–, ಫಿಂಗರ್ ರಿಂಗ್ಸ್ 1,ಚೈನ್ 1, 2844, ಸ್ರೀಜಿತ್ , 58241/–, ಬ್ರಾಡ್ ಬ್ಯಾಂಗಲ್ಸ್ 1, 2845, ಸ್ರೀಜಿತ್ , 28148/–, ಬ್ಯಾಂಗಲ್ 1, 3618, ಅಜಿತ್ ಕುಮಾರ್, 48470/–, ಚೈನ್ 1, ದಕ್ಷಿಣ ಕನ್ನಡ, ದೇರಲಕಟ್ಟೆ, 0109190730009367, ಸಿನಾನ್ ಮೊಯ್ದಿನಾ, 156155/–, ಬ್ರಾಡ್ ಬ್ಯಾಂಗಲ್ಸ್ 1, ದೇರೇ ಬೈಲ್, 0121850700027630, ಶಿವಲಾಲ್ ಪಿ ಎಸ್, 8300/–, ಫಿಂಗರ್ ರಿಂಗ್ಸ್ 1, ದಕ್ಷಿಣ ಕನ್ನಡ, ಫರಂಗೀ ಪೇಟ, 0109200700027622, ಕೆ ಬಿ ಆಡಮ್, 10300/–, ಫಿಂಗರ್ ರಿಂಗ್ಸ್ 1, 0109200730010615, ವಸಂತ್ ಸುರೇಶ್ ಯಾದವ್, 12631/–, ಫಿಂಗರ್ ರಿಂಗ್ಸ್ 1, ದಕ್ಷಿಣ ಕನ್ನಡ, ಜ್ಯೋತಿ ಸರ್ಕಲ್ ಮಂಗಳೂರು, 0115700730010316, ರಂಜಿತ್ ಥಾಮಸ್, 50181/–, ಬ್ರಾಡ್ ಬ್ಯಾಂಗಲ್ಸ್ 1, 0414, ರೋಹನ್ ಜೋಸೆಫ್ ಗೊನ್ಸಾಲ್ವ್ಸ್, 145500/–, ಫಿಂಗರ್ ರಿಂಗ್ಸ್ 1,ಲಾಕೆಟ್ 1,ಸ್ಟಡ್ 2,ಚೈನ್ 2, 0452, ತ್ರಿವೇಣಿ, 11727/–, ಫಿಂಗರ್ ರಿಂಗ್ಸ್ 1, 0865, ಸುಖೇಶ್ ನಾಯ್ಕ್, 62765/–, ಚೈನ್ 1, ದಕ್ಷಿಣ ಕನ್ನಡ, ಕೈಗಂಬ, 0109740700023181, ತೈಬಾಬಾನು ಸರ್ಕಾವರ್, 29900/–, ಫಿಂಗರ್ ರಿಂಗ್ಸ್ 1, 3222, ಮಹಮ್ಮದ್ ತೌಫಿಕ್, 6000/–, ಫಿಂಗರ್ ರಿಂಗ್ಸ್ 1, 3227, ಮಹಮ್ಮದ್ ತೌಫಿಕ್, 6000/–, ಫಿಂಗರ್ ರಿಂಗ್ಸ್ 1, 0109740730019255, ಜುಬೈರ್ ಮೊಹಮ್ಮದ್, 14499/–, ಫಿಂಗರ್ ರಿಂಗ್ಸ್ 1, ದಕ್ಷಿಣ ಕನ್ನಡ, ಕಂಕನಾಡಿ, 0101300700763620, ಲಕ್ಷ್ಮಿ ಲಾಲಾಜಿ, 10000/–, ಫಿಂಗರ್ ರಿಂಗ್ಸ್ 1, 5163, ಗೀತೇಶ್ , 89000/–, ಚೈನ್ 1, 5351, ಹರೀಶ್ , 12000/–, ಚೈನ್ 1, 0101300730024201, ಸುಮಾ, 29470/–, ಫಿಂಗರ್ ರಿಂಗ್ಸ್ 1,ಬೇಬಿ ಬ್ಯಾಂಗಲ್ಸ್ 1, 4202, ಸುಮಾ, 26170/–, ಫಿಂಗರ್ ರಿಂಗ್ಸ್ 1,ಡ್ರಾಪ್ಸ್ & ಸ್ಟಡ್ 1, 4731, ತಳಂಗರ ಮುಖ್ತರ್ ಅಬ್ದುಲ್ಲಾ, 239860/–, ನೆಕ್ ಲೇಸ್ 1,ಚೈನ್ 1, 5636, ದಯಾನಂದ, 26038/–, ಬ್ರೇಸ್ ಲೆಟ್ 1, ಉಡುಪಿ, ಕಾರ್ಕಳ, 0101350700756910, ಸುಧಾಕರ್ ಪೂಜಾರ್ , 24998/–, ಫಿಂಗರ್ ರಿಂಗ್ಸ್ 1,ಲಾಕೆಟ್ 1, 7839, ಮಂಜುನಾಥ ಶಿವ ಪೂಜಾರಿ, 11100/–, ಫಿಂಗರ್ ರಿಂಗ್ಸ್ 1, 8026, ಉಮರ್ ಫಾರೂಕ್, 27000/–, ಚೈನ್ 1, 0101350730022454, ಮೆಲ್ವಿನ್ ಪ್ರಾಕ್ಸಿ ಸೌಜಾ, 81320/–, ಬ್ರೇಸ್ ಲೆಟ್ 1, 2741, ಪದ್ಮನಾಭ ಡಿ, 10323/–, ಫಿಂಗರ್ ರಿಂಗ್ಸ್ 1, 2755, ಪ್ರಶಾಂತಾ, 5795/–, ಡ್ರಾಪ್ಸ್ & ಸ್ಟಡ್ 1, 2756, ಪ್ರಶಾಂತಾ, 13741/–, ಚೈನ್ 1, 3485, ಫೆಲಿಕ್ಸ್ ಮಥಾಯಿಸ್ , 440944/–, ಬ್ಯಾಂಗಲ್ 1,ನೆಕ್ ಲೇಸ್ 1,ಚೈನ್ 1, ದಕ್ಷಿಣ ಕನ್ನಡ, ಕಾವೂರು, 0117190700029053, ಅಜಿತ್ ವಿ, 5000/–, ಸ್ಟಡ್ 1, 9732, ಶಶಿಧರ್, 12900/–, ಫಿಂಗರ್ ರಿಂಗ್ಸ್ 1, 0117190730015574, ಅಲೋಕ್ ಸಿಂಗ್, 65800/–, ಚೈನ್ 1, 5617, ಅರುಣ ಇರಪ್ಪ, 8950/–, ಸ್ಟಡ್ 1, ಉಡುಪಿ, ಕೋಟೇಶ್ವರ, 0130050730008033, ವಿನಾಯಕ್ ಕುಂಬಾರ್, 42632/–, ಚೈನ್ 1, 9622, ಸುಜಾತ ಎನ್, 13637/–, ಡ್ರಾಪ್ಸ್ 1, 9661, ಗಂಗಾಧರ ಆಚಾರಿ, 30420/–, ಡ್ರಾಪ್ಸ್ & ಸ್ಟಡ್ 1, 0470, ವಿ ಸಂಪತ್ ಕುಮಾರ್, 246528/–, ಬ್ರಾಡ್ ಬ್ಯಾಂಗಲ್ಸ್ 1,ಡ್ರಾಪ್ಸ್ & ಸ್ಟಡ್ 1, ಉಡುಪಿ, ಕುಂದಾಪುರ, 0130680700023924, ವಿವೇಕ್ ಜಿ ನಾಯಕ್, 46900/–, ಫಿಂಗರ್ ರಿಂಗ್ಸ್ 1,ಚೈನ್ 1, 0130680730011881, ಶರತ್ ಬಸವ, 111553/–, ನೆಕ್ ಲೇಸ್ 1, 1889, ರವಿಕಿರಣ ಬಸವ ಪೂಜಾರಿ, 24653/–, ಸ್ಟಡ್ 1,ಮಟ್ಟಿ 1, 1955, ಅಕ್ಷತಾ ಸೀತಾರಾಮ ಶೆಟ್ಟಿ, 23868/–, ಚೈನ್ 1, 2358, ಧೀರಾಜ್, 35004/–, ಚೈನ್ 1, 2386, ವಿಶಾಲ್ ಜಿ ನಾಯ್ಕ್, 12177/–, ಡ್ರಾಪ್ಸ್ & ಸ್ಟಡ್ 1, 2418, ಶಾರದಾ, 16798/–, ಸ್ಟಡ್ 1, ಕೊಡಗು, ಕುಶಾಲ್ ನಗರ, 0129120700028663, ರಘು ಬಿ ಎಸ್, 17400/–, ಫಿಂಗರ್ ರಿಂಗ್ಸ್ 1, 8951, ಪ್ರೀತ್ ಪೊನ್ನಮ್ಮ ಎಂ ಟಿ, 29960/–, ಫಿಂಗರ್ ರಿಂಗ್ಸ್ 1, 9029, ಪಿ ವೈ ಜ್ಯೋತಿ, 6300/–, ಫಿಂಗರ್ ರಿಂಗ್ಸ್ 1, 9065, ಗಣೇಶ್. ಕೆ., 5926/–, ಫಿಂಗರ್ ರಿಂಗ್ಸ್ 1, 9224, ಭೂಮಿಕಾ ಎಂ, 18400/–, ಡ್ರಾಪ್ಸ್ & ಸ್ಟಡ್ 1, 0129120730022490, ವನಜಾಕ್ಷಿ ಜಿ ಎಚ್, 62506/–, ಚೈನ್ 1, 2491, ವನಜಾಕ್ಷಿ ಜಿ ಎಚ್, 47481/–, ಬ್ರಾಡ್ ಬ್ಯಾಂಗಲ್ಸ್ 1, ಕೊಡಗು, ಮಡಿಕೇರಿ, 0105200700032727, ಯುನಿತ್ ಪಿ ಎನ್, 11400/–, ಫಿಂಗರ್ ರಿಂಗ್ಸ್ 1, 4427, ಜೀವನ್ ಎಚ್ ಜಿ, 20000/–, ಡ್ರಾಪ್ಸ್ & ಸ್ಟಡ್ 1, 0105200730013342, ಅನುರಾಗ್ ಶರ್ಮ , 203448/–, ಫಿಂಗರ್ ರಿಂಗ್ಸ್ 1,ಸ್ಟಡ್ 1,ಮಟ್ಟಿ 2,ಚೈನ್ 1, 3417, ಜೆ ಎಸ್ ತೇಜಸ್ವಾನಿ, 18735/–, ಸ್ಟಡ್ 1, 3818, ಮೊಹಮ್ಮದ್ ಆಫ್ರೋಜ್, 30341/–, ಫಿಂಗರ್ ರಿಂಗ್ಸ್ 1,ಡ್ರಾಪ್ಸ್ & ಸ್ಟಡ್ 1, 3949, ಅನಿಲ್ ಕುಮಾರ್ ಕೆ ಎನ್, 37030/–, ಚೈನ್ 1, 4056, ಅನೀಶ್ ಎಂ ಎಸ್, 22107/–, ಫಿಂಗರ್ ರಿಂಗ್ಸ್ 1, 4152, ಎಸ್ ಜೀವನ್ ಕುಮಾರ್, 29883/–, ಚೈನ್ 1, 4560, ಸಂಗೀತಾ ಎಂ ಬಿ, 35163/–, ಡ್ರಾಪ್ಸ್ & ಸ್ಟಡ್ 1, 4642, ವೀಣಾ ಜಿ, 12005/–, ಡ್ರಾಪ್ಸ್ & ಸ್ಟಡ್ 1, 4850, ಲೋಕನಾಥ ಕೆ, 50011/–, ಫಿಂಗರ್ ರಿಂಗ್ಸ್ 1, ದಕ್ಷಿಣ ಕನ್ನಡ, ಮಂಗಳೂರು, 0100210700233010, ಫರ್ಹಾ, 22000/–, ಲಾಕೆಟ್ 1,ಸ್ಟಡ್ 1, ಉಡುಪಿ, ಮಣಿಪಾಲ, 0118340730012909, ಸುನಿಲ್ ಎನ್ ಜಿಬಿ, 79419/–, ಬ್ರಾಡ್ ಬ್ಯಾಂಗಲ್ಸ್ 1, 2910, ಸುನಿಲ್ ಎನ್ ಜಿಬಿ, 16924/–, ಫಿಂಗರ್ ರಿಂಗ್ಸ್ 1, 2929, ಸುನಿಲ್ ಎನ್ ಜಿಬಿ, 26512/–, ಫಿಂಗರ್ ರಿಂಗ್ಸ್ 1, ದಕ್ಷಿಣ ಕನ್ನಡ, ಮೂಡಬಿದ್ರಿ, 0116640700034602, ವಿನಿಲ್, 29500/–, ಚೈನ್ 1, 0116640730015026, ಹರೀಶ್ , 47000/–, ನೆಕ್ ಲೇಸ್ 1, 5097, ಪ್ರಶಾಂತಿ, 137504/–, ಚೈನ್ 1, ದಕ್ಷಿಣ ಕನ್ನಡ, ಮುಲ್ಕೀ ಕಾರ್ನಾಡ್, 0123320730013365, ದಿವಾಕರ್ ಸಾಲಿಯಾನ್, 23246/–, ಫಿಂಗರ್ ರಿಂಗ್ಸ್ 1, 3430, ಅಬ್ದುಲ್ ಸಮೀರ್, 850065/–, ಬ್ರಾಡ್ ಬ್ಯಾಂಗಲ್ಸ್ 1, ಕೊಡಗು, ಮುರ್‌ನಾಡ್ ಮಡಿಕೇರಿ, 0116250700029806, ಆಥಿಕ ಎಂ ಎ, 90501/–, ಲಾಕೆಟ್ 1,ಡ್ರಾಪ್ಸ್ 1,ಡ್ರಾಪ್ಸ್ & ಸ್ಟಡ್ 1,ಚೈನ್ 1, 0116250730013206, ಹಂಸಾ ಕೆ ಎಂ , 13022/–, ಸ್ಟಡ್ 1, 3958, ರವಿ ಎಚ್ ಆರ್, 19315/–, ಚೈನ್ 1, 5203, ಮೊಹಮೀದ್ ಸಫಿ ಎಂ ಹೆಚ್, 235028/–, ನೆಕ್ ಲೇಸ್ 1,ಹ್ಯಾಂಡ್ ಸೆಟ್ಸ್ 1,ಡ್ರಾಪ್ಸ್ & ಸ್ಟಡ್ 1, ದಕ್ಷಿಣ ಕನ್ನಡ, ಮೈಸೂರು ರೋಡು ಪುತ್ತೂರ್, 0101220700765080, ವೀಣಾ ಬಾಯಿ, 8593/–, ಲಾಕೆಟ್ 1, 0101220730017182, ದಿವಾಕರ ಬಿ, 14572/–, ಫಿಂಗರ್ ರಿಂಗ್ಸ್ 1, 7186, ದಿವಾಕರ ಬಿ, 8205/–, ಡ್ರಾಪ್ಸ್ & ಸ್ಟಡ್ 1, 7440, ಅಶೋಕ್ ಜಿ, 27639/–, ಫಿಂಗರ್ ರಿಂಗ್ಸ್ 1, 7634, ಶ್ರೀನಿವಾಸ್ ಕೆ., 14771/–, ಫಿಂಗರ್ ರಿಂಗ್ಸ್ 1, ದಕ್ಷಿಣ ಕನ್ನಡ, ನಾಗೂರೀ ಮಂಗಳೂರು, 0121420730013580, ಮಂಜುನಾಥ ಪುರತಗೇರಿ, 59137/–, ಚೈನ್ 1, ಕೊಡಗು, ಶನಿವಾರಸಂತೆ, 0118840700027668, ಮದನ್ ಕೆ ಎಂ, 16160/–, ಫಿಂಗರ್ ರಿಂಗ್ಸ್ 1,ಸ್ಟಡ್ 1,ಡ್ರಾಪ್ಸ್ 1, 8416, ಕುಮಾರ, 14850/–, ಫಿಂಗರ್ ರಿಂಗ್ಸ್ 1, ಕೊಡಗು, 0110660700033134, ಹಮ್ಸಾ ಕೆ ಯು, 16621/–, ಡ್ರಾಪ್ಸ್ & ಸ್ಟಡ್ 1, ಕೊಡಗು, ಸೋಮವಾರಪೇಟೆ, ಕೊಡಗು, 0129510700024299, ಪ್ರವೀಣ ಕೆ ಕೆ, 10000/–, ಸ್ಟಡ್ 1, 4489, ಗಿರೀಶ್ ಜಿ ಬಿ, 5000/–, ಲಾಕೆಟ್ 1, 5110, ಸುಪ್ರಿಯಾ ಸಿ, 18000/–, ಸ್ಟಡ್ 1,ಡ್ರಾಪ್ಸ್ & ಸ್ಟಡ್ 1, 5143, ಕುಮಾರ್ ಟಿ ಎಂ, 12000/–, ಫಿಂಗರ್ ರಿಂಗ್ಸ್ 1, 0129510730016988, ಬಿ ಆರ್ ಮುತ್ತಪ್ಪ, 6109/–, ಫಿಂಗರ್ ರಿಂಗ್ಸ್ 1, ದಕ್ಷಿಣ ಕನ್ನಡ, ಸುಳ್ಯ, 0101360700740010, ರವಿಚಂದ್ರ ಎ, 10000/–, ಫಿಂಗರ್ ರಿಂಗ್ಸ್ 1, 0684, ಜನಾರ್ಧನ, 15740/–, ಸ್ಟಡ್ 1, 0101360730012271, ನೇತ್ರಾವತಿ ಮೈಲಾರಪ್ಪ ಮಾಯಗೇರಿ, 5015/–, ಲಾಕೆಟ್ 1, 3640, ಪ್ರಶಾಂತ ಎಂ, 10426/–, ಡ್ರಾಪ್ಸ್ & ಸ್ಟಡ್ 1, 3764, ಬಿ ಅಬ್ದುಲ್ ರಶೀದ್, 9957/–, ಬ್ರೇಸ್ ಲೆಟ್ 1, 3765, ಬಿ ಅಬ್ದುಲ್ ರಶೀದ್, 17831/–, ಡ್ರಾಪ್ಸ್ & ಸ್ಟಡ್ 1, 4043, ಮನೋಜ್ ಜಿ ಕೆ, 9844/–, ಫಿಂಗರ್ ರಿಂಗ್ಸ್ 1, ದಕ್ಷಿಣ ಕನ್ನಡ, ಥೊಕ್ಕೊಟ್ಟು, 0101310700747790, ರೇಣುಕಾ ಮಂಜಪ್ಪ ಓಲೇಕಾರ, 14300/–, ಡ್ರಾಪ್ಸ್ & ಸ್ಟಡ್ 1, 0101310730008101, ಕೌಶಿಕ್ , 5523/–, ಸ್ಟಡ್ 1, 8681, ಕೌಶಿಕ್ , 9217/–, ಫಿಂಗರ್ ರಿಂಗ್ಸ್ 1, 9034, ನವೀನ್ ಡಿಸೋಜ, 27130/–, ಫಿಂಗರ್ ರಿಂಗ್ಸ್ 1, ಉಡುಪಿ, ಉಡುಪಿ, 0101230700754068, ಉಲ್ಲಾಸ್ ಆರ್, 17000/–, ಲಾಕೆಟ್ 1, 0101230730017951, ಅಶ್ವಿನಿ, 10079/–, ಚೈನ್ 1, 8780, ಅನಿಲ್ ಕುಮಾರ್ ಎಸ್ ಟಿ, 7925/–, ಸ್ಟಡ್ 1, 0768, ಉಲ್ಲಾಸ್ ಆರ್, 149200/–, ಚೈನ್ 1, ದಕ್ಷಿಣ ಕನ್ನಡ, ಉರವಾಸ್ಟೋರ್ ಚಿಲಿಂಬಿ, 0115420700024042, ಯಲ್ಲವ್ವ ಪೂಜಾರ್, 7800/–, ಸ್ಟಡ್ 1, 4297, ನಿತಿನ್, 13500/–, ಫಿಂಗರ್ ರಿಂಗ್ಸ್ 1, 4372, ಅಧಿತ್ ಇ ಕೆ, 14000/–, ಫಿಂಗರ್ ರಿಂಗ್ಸ್ 1, 4387, ಸ್ವಾತಿ, 7500/–, ಫಿಂಗರ್ ರಿಂಗ್ಸ್ 1, 4446, ಸವಿತಾ, 35943/–, ಡ್ರಾಪ್ಸ್ & ಸ್ಟಡ್ 1,ಚೈನ್ 1, 4455, ನಿತಿನ್ ಕುಮಾರ್ , 49000/–, ಸ್ಟಡ್ 1, 0115420730021081, ಸೋನಿ, 11020/–, ಸ್ಟಡ್ 1, 2121, ನೀತಿ ಎಚ್ ನಾಥ್, 98938/–, ನೆಕ್ ಲೇಸ್ 1, 2122, ನೀತಿ ಎಚ್ ನಾಥ್, 137291/–, ಫಿಂಗರ್ ರಿಂಗ್ಸ್ 1,ಬ್ರಾಡ್ ಬ್ಯಾಂಗಲ್ಸ್ 1,ಲಾಕೆಟ್ 1,ಸ್ಟಡ್ 1,ಚೈನ್ 1, 3162, ಸ್ವಾತಿ, 14105/–, ಸ್ಟಡ್ 1, ಕೊಡಗು, ವೀರಾಜ್ ಪೇಟೆ, 0111930700030241, ಜಕಾರಿಯಾ ಸಿ ಎಚ್, 11000/–, ಡ್ರಾಪ್ಸ್ & ಸ್ಟಡ್ 1, 0958, ಪ್ರವೀಣ ಎಸ್, 4500/–, ಡ್ರಾಪ್ಸ್ & ಸ್ಟಡ್ 1, 2428, ಪ್ರಹ್ಲಾದ, 15000/–, ಲಾಕೆಟ್ 1,ಸ್ಟಡ್ 1, 0111930730011553, ಗಣೇಶ್ ಎಚ್ ಕೆ, 22358/–, ಫಿಂಗರ್ ರಿಂಗ್ಸ್ 1,ಚೈನ್ 1, 2037, ಜೆ ಎಸ್ ಅನಿಲ್, 14765/–, ಡ್ರಾಪ್ಸ್ & ಸ್ಟಡ್ 1, 2444, ಉಮೇಶ್ ಸಿ ಪಿ, 25093/–, ಫಿಂಗರ್ ರಿಂಗ್ಸ್ 1,

ಮೇಲಿನ ಹರಾಜಿನಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿಗಳು ಈ ಮುಂದೆ ತಿಳಿಸಿರುವುದನ್ನು ಅನುಸರಿಸತಕ್ಕದ್ದು:– ಆಸಕ್ತಿಯುಳ್ಳ ಸವಾಲು ಕೂಗುವವರು (ಬಿಡ್ಡರ್ ಗಳು) ಎನ್‌ಇಎಫ್ ಟಿ/ಆರ್ ಟಿಜಿಎಸ್ ವಿಧಾನದ ಮೂಲಕ ರೂ. 10,000/ ಅನ್ನು ಇಎಂಡಿ (ವಿಫಲಗೊಂಡ ಸವಾಲು ಕೂಗುವವರಿಗೆ ಮರುಪಾವತಿಯಾಗುವಂಥದ್ದು) ಆಗಿ ಹರಾಜಿನ ದಿನದಂದೇ ಸಲ್ಲಿಸಬೇಕು. ಸವಾಲು ಕೂಗುವವರು ಮಾನ್ಯವಾದ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಇಟ್ಟುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 9072607147 ಅನ್ನು ಸಂಪರ್ಕಿಸಿ.

ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಲಿ. ಪರವಾಗಿ

# ಕದ್ರಿ ಶಿವಭಾಗ್ ವಾರ್ಡ್: ತಡೆಗೋಡೆ ನಿರ್ಮಾಣಕ್ಕೆ ಚಾಲನೆ

• **ಕನ್ನಡಪ್ರಭ ವಾರ್ತೆ ಮಂಗಳೂರು**



ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 34ನೇ ಕದ್ರಿ ಶಿವಭಾಗ್ ವಾರ್ಡಿನ ಬಿಕರ್ನಕಟ್ಟೆ ನಾಗಬ್ರಹ್ಮ ದೈವಸ್ಥಾನದ ಹತ್ತಿರ ತಡೆಗೋಡೆ ನಿರ್ಮಾಣ ಕಾಮಗಾರಿ ಲೋಕೋಪಯೋಗಿ ಇಲಾಖೆಯ 30 ಲಕ್ಷ ರು. ವಿಶೇಷ ಅನುದಾನದಲ್ಲಿ ನಡೆಯಲಿದ್ದು ಗುದ್ದಲಿ ಪೂಜೆ ನೆರವೇರಿಸಲಾಯಿತು.ಶಾಸಕ ವೇದವ್ಯಾಸ ಕಾಮತ್ ನೇತೃತ್ವದಲ್ಲಿ ಗುದ್ದಲಿ ಪೂಜೆ ನಡೆಯಿತು. ಬಳಿಕ ಮಾತನಾಡಿದ ಶಾಸಕರು, ಮಳೆಗಾಲದಲ್ಲಿ ಈ ಪ್ರದೇಶಕ್ಕೆ ತೊಂದರೆ ಉಂಟಾಗುತ್ತಿದ್ದ ಬಗ್ಗೆ ಸ್ಥಳೀಯರು ಮಾಡಿದ ಮನವಿಗೆ ಅನುಗುಣವಾಗಿ, ಪದವು ಮೇಗಿನ ಮನೆ ನಾಯ್ಗರ ಮನೆತನದ ರಸ್ತೆಗೆ ತಾಗಿರುವ ರಾಜಕಾಲುವೆಗೆ ತಡೆಗೋಡೆ ಕಾಮಗಾರಿ ನಡೆಯಲಿದೆ. ಇಂದು ಕ್ಷೇತ್ರದ ಅಭಿವೃದ್ಧಿಗೆ ನೂರಾರು ಕೋಟಿ ಅನುದಾನಗಳ ಅಗತ್ಯವಿದ್ದರೂ ರಾಜ್ಯ ಸರ್ಕಾರದಿಂದ ಯಾವುದೇ ಬೆಂಬಲ ದೊರೆಯುತ್ತಿಲ್ಲ. ಹಾಗಾಗಿ ಇರುವ ಅತ್ಯಲ್ಪ ಅನುದಾನಗಳನ್ನೇ ಬಳಸಿಕೊಂಡು ಅತೀ ಅಗತ್ಯವಿರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು ಶೀಘ್ರದಲ್ಲಿ ಇದು ಪೂರ್ಣಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಿಕಟಪೂರ್ವ ಪಾಲಿಕೆ ಸದಸ್ಯೆ ಕಾವ್ಯ ನಟರಾಜ್ ಆಳ್ವ, ವಾರ್ಡ್ ಅಧ್ಯಕ್ಷ ವಿಕ್ರಂ ಚೌಟ, ಯೋಗೀಶ್ ಶೆಣೈ, ನವೀನ್ ಶೆಣೈ, ಗೋಪಾಲಕೃಷ್ಣ ಶೆಣೈ, ಶಿವರಾಮ್ ಭಂಡಾರಿ, ದಿನೇಶ್ ಶೆಣೈ, ರಾಮಚಂದ್ರ ಚೌಟ, ಹರೀಶ್ ಪ್ರಭು, ಡಾ.ಯು.ಡಿ.ನಾಯಕ್, ಉಮೇಶ್ ಶೆಣೈ, ರಾಜೇಶ್ ಮತ್ತಿತರರು ಇದ್ದರು.

# ರಸ್ತೆ ಕಾಂಕ್ರೀಟ್ ಕಾಮಗಾರಿ ಗದ್ದಲ: ಸದನದ ಬಾವಿಗಿಳಿದು ಪ್ರತಿಭಟನೆ

## ಡಿಪಿಆರ್ ಆಗದೇ ಟೋಲ್ ಸಂಗ್ರಹ ಹೇಗೆ: ಕೌನ್ಸಿಲರ್ ಸುಜಿತ್ ಮಾಡೂರು ಆಕ್ಷೇಪ

• **ಕನ್ನಡಪ್ರಭವಾರ್ತೆ** ಉಳ್ಳಾಲ

ಕೋಟೆಕಾರು ಪಟ್ಟಣ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ರಸ್ತೆ ಕಾಂಕ್ರೀಟಿಕರಣ ವಿಚಾರ ತೀವ್ರ ಗದ್ದಲಕ್ಕೆ ಸಾಕ್ಷಿಯಾಯಿತು. 11ನೇ ವಾರ್ಡಿನ ಪಾನೀರು ರಾಮಾಶ್ರಯ ರಸ್ತೆ ಕಾಮಗಾರಿಯಲ್ಲಿ ತಾರತಮ್ಯ ನಡೆದಿದೆ ಎಂದು ಆರೋಪಿಸಿದ ಕೌನ್ಸಿಲರ್ ಹರೀಶ್ ರಾವ್ ಮಡ್ಯಾರ್ ಸಭೆಯ ಬಾವಿಗಿಳಿದು ಪ್ರತಿಭಟನೆ ನಡೆಸಿದರು.

11ನೇ ವಾರ್ಡಿನ ರಾಮಾಶ್ರಯ ರಸ್ತೆಗೆ ₹5 ಲಕ್ಷ ಅನುದಾನ ಮೀಸಲಿಟ್ಟು ಕಾಮಗಾರಿ ಆರಂಭಿಸಲಾಗಿತ್ತು. ಲಭ್ಯ ಅನುದಾನದ ಆಧಾರದಲ್ಲಿ ರಸ್ತೆಯ ಕೊನೆಯ ಭಾಗದಿಂದ ಕಾಂಕ್ರೀಟಿಕರಣ ಕಾಮಗಾರಿ ಕೈಗೊಳ್ಳಲಾಗುತ್ತಿತ್ತು. ಈ ಸಂದರ್ಭ ಕ್ರೈಸ್ತ ಸಮುದಾಯಕ್ಕೆ ಸೇರಿದ ಮಹಿಳೆಯೊಬ್ಬರ ಮನೆ ಮುಂಭಾಗ ರಸ್ತೆ ಕಾಂಕ್ರೀಟಿಕರಣ ಮಾಡದೇ ಬಿಟ್ಟಿರುವ ಕುರಿತು ಸ್ಥಳೀಯರು ಹಾಗೂ ಕಾಂಗ್ರೆಸ್ ಮುಖಂಡರು ಪಟ್ಟಣ ಪಂಚಾಯಿತಿ ಆಡಳಿತಕ್ಕೆ ದೂರು ನೀಡಿದ್ದರು.

ದೂರು ಹಿನ್ನೆಲೆಯಲ್ಲಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದ ವೇಳೆ ಅಧ್ಯಕ್ಷೆ ದಿವ್ಯಾ ಎಸ್. ಶೆಟ್ಟಿ ಹಾಗೂ ಸ್ಥಳೀಯರ ನಡುವೆ ವಾಗ್ವಾದ ನಡೆದಿತ್ತು. ಈ ವಿಚಾರದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಇದೇ ವಿಚಾರವನ್ನು ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪಿಸಿದ ಕೌನ್ಸಿಲರ್ ಹರೀಶ್ ರಾವ್ ಮಡ್ಯಾರ್, ತನ್ನ ಗಮನಕ್ಕೆ ತಾರದೇ ಕಾಮಗಾರಿ ನಡೆಸಲಾಗಿದೆ ಎಂದು ಆರೋಪಿಸಿದರು.

ಸಭೆಯಲ್ಲಿ ಅಧ್ಯಕ್ಷೆ ದಿವ್ಯಾ ಎಸ್. ಶೆಟ್ಟಿ, ಗೊಂದಲಗಳಿದ್ದರೆ ಕಾಮಗಾರಿಯನ್ನೇ ಸ್ಥಗಿತಗೊಳಿಸಲಾಗುವುದು ಎಂದು ಹೇಳುತ್ತಿದ್ದಂತೆ ಆಕ್ರೋಶಗೊಂಡ ಹರೀಶ್ ರಾವ್ ಮಡ್ಯಾರ್, ನನ್ನ ವಾರ್ಡಿನ ರಸ್ತೆ ಸಂಪೂರ್ಣ ಕಾಂಕ್ರೀಟಿಕರಣಗೊಳ್ಳುವವರೆಗೂ ಪ್ರತಿಭಟನೆ ಮುಂದುವರಿಸುತ್ತೇನೆ ಎಂದು ಹೇಳಿ ಸಭೆಯ ಬಾವಿಗಿಳಿದು ಪ್ರತಿಭಟನೆ ನಡೆಸಿದರು.



ಹರೀಶ್ ರಾವ್ ಮಡ್ಯಾರ್ ಕೋಟೆಕಾರು ಪಟ್ಟಣ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಬಾವಿಗಿಳಿದು ಪ್ರತಿಭಟನೆ ನಡೆಸಿದರು.

ಈ ವೇಳೆ ಹಲವು ಸದಸ್ಯರು, ಸಂಬಂಧಿತ ವಾರ್ಡಿನ ಕೌನ್ಸಿಲರ್‌ಗಳಿಗೆ ಮಾಹಿತಿ ನೀಡದೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಇದು ಚುನಾಯಿತ ಪ್ರತಿನಿಧಿಗಳಿಗೆ ಅಗೌರವ ತೋರಿದಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅಧ್ಯಕ್ಷೆ ದಿವ್ಯಾ ಸುರೇಶ್ ಶೆಟ್ಟಿ, ಈ ವಿಚಾರದಲ್ಲಿ ಯಾವುದೇ ಧರ್ಮವನ್ನು ಎಳೆದು ತರಲಾಗಿಲ್ಲ. ಸ್ಥಳೀಯರು ನೇರವಾಗಿ ಅಧ್ಯಕ್ಷರಿಗೆ ಮಾಹಿತಿ ನೀಡಬೇಕಿತ್ತು. ರಸ್ತೆ ಬಹುವರ್ಷಗಳಬೇಡಿಕೆಯಾಗಿದ್ದು,ಮಳೆಗಾಲದಲ್ಲಿಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದರು. ಲಭ್ಯ ಅನುದಾನದ ಮಿತಿಯಲ್ಲಿ ಕಾಮಗಾರಿ ನಡೆಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಸಭೆಯಲ್ಲಿ ಕೌನ್ಸಿಲರ್ ಸುಜಿತ್ ಮಾಡೂರು, ವಸತಿ ಯೋಜನೆಗೆ ಹಲವು ವರ್ಷಗಳ ಹಿಂದೆ ಅರ್ಜಿ ಸಲ್ಲಿಸಿದ ಬಡವರಿಗೆ ಇನ್ನೂ ನಿವೇಶನ ವಿತರಣೆ ಆಗಿಲ್ಲ ಎಂದು ಆರೋಪಿಸಿದರು. ಅಲ್ಲದೆ ಕುಂಪಲ ಬೈಪಾಸ್‌ನಿಂದ ಕೋಟೆಕಾರುವರೆಗಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಸರ್ವಿಸ್ ರಸ್ತೆ ಇಲ್ಲದಿರುವುದರಿಂದ ಅಪಾಯ ಹೆಚ್ಚಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಇದಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿ, ಸರ್ವಿಸ್ ರಸ್ತೆಗೆ ಇನ್ನೂ ಡಿಪಿಆರ್ ಸಿದ್ಧವಾಗಿಲ್ಲ ಎಂದು ತಿಳಿಸಿದಾಗ, ಡಿಪಿಆರ್ ಆಗದೇ ಟೋಲ್ ಸಂಗ್ರಹ ಹೇಗೆ ನಡೆಯುತ್ತಿದೆ? ಎಂದು ಸದಸ್ಯರು ಪ್ರಶ್ನಿಸಿ ಆಕ್ಷೇಪ ವ್ಯಕ್ತಪಡಿಸಿದರು.

ಸುದೀರ್ಘ ಗದ್ದಲ ಹಾಗೂ ಪ್ರತಿಭಟನೆಯ ಬಳಿಕ ಕಾಂಗ್ರೆಸ್ ಹಾಗೂ ಎಸ್‌ಡಿಪಿಐ ಸದಸ್ಯರು ಸಭಾತ್ಯಾಗ ನಡೆಸಿದರು.

ಸಭೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಧೀರಜ್ ಕುಸಾಲ್‌ನಗರ ಹಾಗೂ ಮುಖ್ಯಾಧಿಕಾರಿ ಮಾಲಿನಿ ಉಪಸ್ಥಿತರಿದ್ದರು

**ಹೋರಾಟ** ರಸ್ತೆ ಹೊಂಡದಲ್ಲಿನ ನೀರಿನಲ್ಲಿ ಬಲೆ ಹಾಕಿ ಮೀನು ಹಿಡಿಯುವ ನಾಟಕೀಯ ದೃಶ್ಯ ಪ್ರದರ್ಶನ!

# ಪುರಸಭೆ ನಿರ್ಲಕ್ಷ್ಯ ಧೋರಣೆ ಆರೋಪ: ಮಾಜಿ ಸದಸ್ಯ ಪ್ರತಿಭಟನೆ

• **ಕನ್ನಡಪ್ರಭ ವಾರ್ತೆ ಕಾರ್ಕಳ**

ರಸ್ತೆಯ ನಡುವೆ ಬೃಹತ್ ಹೊಂಡ ನಿರ್ಮಾಣವಾಗಿ ವಾರಗಳು ಕಳೆದರೂ ಗಮನಹರಿಸದ ಪುರಸಭೆ ನಿರ್ಲಕ್ಷ್ಯ ಧೋರಣೆಗೆ ಬೇಸತ್ತ ಪುರಸಭೆ ಮಾಜಿ ಸದಸ್ಯರೊಬ್ಬರು ಹೊಂಡದಲ್ಲಿ ಮೀನು ಹಿಡಿಯುವ ಮೂಲಕ ಅಣಕಿಸಿ ಪ್ರತಿಭಟನೆ ನಡೆಸಿದ ಘಟನೆ ಶುಕ್ರವಾರ ಕಾರ್ಕಳದಲ್ಲಿ ನಡೆದಿದೆ.

**ಘಟನೆ ಹಿನ್ನೆಲೆ:** ಕಾರ್ಕಳದಿಂದ ಮಂಗಳೂರು ಸಂಪರ್ಕಿಸುವ ಪ್ರಮುಖ ರಸ್ತೆಯ ಪುರಸಭೆ ವ್ಯಾಪ್ತಿಯ ಅನಂತಶಯನ ದೇವಸ್ಥಾನ ಸಮೀಪದ ರಸ್ತೆ ಬದಿಯಲ್ಲಿ ಈ ಅಪಾಯಕಾರಿ ಹೊಂಡ ನಿರ್ಮಾಣವಾಗಿದೆ.

ವಾಸ್ತವವಾಗಿ ಇದು ಕೇಬಲ್ ನೆಟ್‌ವರ್ಕ್ ಅಳವಡಿಕೆಗಾಗಿ ನಿರ್ಮಿಸಲಾದ ಛೇಂಬರ್ ಆಗಿದ್ದು, ಕಾಮಗಾರಿಯ ಕಳಪೆ ಗುಣಮಟ್ಟದಿಂದಾಗಿ ಸುಮಾರು 15 ದಿನಗಳ ಹಿಂದೆ ಮೇಲ್ಭಾಗ ಕುಸಿದು ಬಿದ್ದಿದೆ. ಪರಿಣಾಮವಾಗಿ ರಸ್ತೆ ಬದಿಯಲ್ಲಿ ಆಳವಾದ ಹೊಂಡ ನಿರ್ಮಾಣವಾಗಿದೆ.



ಬಲೆ ಹಾಕಿ ಮೀನು ಹಿಡಿಯುವ ಪ್ರತಿಭಟನೆ.

■ ಮಾಜಿ ಸದಸ್ಯ ಪ್ರಕಾಶ್ ರಾವ್ ಅವರು ಸ್ವತಃ ಎಚ್ಚರಿಕೆ ಫಲಕಗಳನ್ನು ಅಳವಡಿಸಿ ಕ್ರಮಕ್ಕೆ ಒತ್ತಾಯಿಸಿದ್ದರು. ಆದರೂ, ಅಧಿಕಾರಿಗಳು ಯಾವುದೇ ಸ್ಪಂದನೆ ನೀಡದೆ ಜಾಣ ಮೌನ ವಹಿಸಿದ್ದಕ್ಕೆ ಕೆರಳಿದ ಪ್ರಕಾಶ್ ರಾವ್ ಮೇ 29ರಂದು ಪ್ರತಿಭಟಿಸಿದ್ದಾರೆ.

**ಸಾರ್ವಜನಿಕರ ಆಕ್ರೋಶ:** ಈ ರಸ್ತೆ ಅತ್ಯಂತ ಜನನಿಬಿಡವಾಗಿದ್ದು, ಪ್ರತಿದಿನ ಸಾವಿರಾರು ವಾಹನ ಸವಾರರು, ಶಾಲೆ, ಕಾಲೇಜು ವಿದ್ಯಾರ್ಥಿಗಳು ಹಾಗೂ ಪಾದಚಾರಿಗಳು ಸಂಚರಿಸುತ್ತಾರೆ.

ಹೊಂಡವು ಬಾಯಿ ತೆರೆದುಕೊಂಡಿದ್ದು, ರಾತ್ರಿ ವೇಳೆ ವಾಹನ ಸವಾರರು ಇಲ್ಲಿ ಬಿದ್ದು ಅಪಘಾತಕ್ಕೀಡಾಗುವ ಸಾಧ್ಯತೆಗಳು ಹೆಚ್ಚಾಗಿವೆ. ಅಲ್ಲದೆ ಹೊಂಡದಲ್ಲಿ ನಿಂತಿರುವ ನೀರಿನಿಂದ ಸೊಳ್ಳೆಗಳು ಉತ್ಪತ್ತಿಯಾಗುತ್ತಿದ್ದು, ಸಾಂಕ್ರಾಮಿಕ ರೋಗಗಳ ಭೀತಿಯೂ ಎದುರಾಗಿದೆ.

10 ದಿನಗಳ ಹಿಂದೆಯೇ ಈ ಬಗ್ಗೆ ಪುರಸಭೆ ಗಮನಕ್ಕೆ ತರಲಾಗಿತ್ತು. ಮಾಜಿ ಸದಸ್ಯ ಪ್ರಕಾಶ್ ರಾವ್ ಅವರು ಸ್ವತಃ ಎಚ್ಚರಿಕೆ ಫಲಕಗಳನ್ನು ಅಳವಡಿಸಿ ಕ್ರಮಕ್ಕೆ ಒತ್ತಾಯಿಸಿದ್ದರು.

ಆದರೂ, ಅಧಿಕಾರಿಗಳು ಯಾವುದೇ ಸ್ಪಂದನೆ ನೀಡದೆ ಜಾಣ ಮೌನ ವಹಿಸಿದ್ದಕ್ಕೆ ಕೆರಳಿದ ಪ್ರಕಾಶ್ ರಾವ್ ಮೇ 29ರಂದು ವಿನೂತನವಾಗಿ ಪ್ರತಿಭಟಿಸಿದ್ದಾರೆ.

**ಮೀನು ಹಿಡಿಯುವ ಮೂಲಕ ಅಣಕ:** ಸಮಸ್ಯೆಯನ್ನು ನಿರ್ಲಕ್ಷಿಸಿದ ಆಡಳಿತಕ್ಕೆ ಬುದ್ಧಿ ಕಲಿಸುವ ಉದ್ದೇಶದಿಂದ ಹೊಂಡದಲ್ಲಿನ ನೀರಿನಲ್ಲಿ ಬಲೆ ಹಾಕಿ ಮೀನು ಹಿಡಿಯುವ ನಾಟಕೀಯ ದೃಶ್ಯವನ್ನು ಪ್ರದರ್ಶಿಸುವ ಮೂಲಕ ಪ್ರಕಾಶ್ ರಾವ್ ಪ್ರತಿಭಟನೆ ನಡೆಸಿದರು.

ರಸ್ತೆ ಹೊಂಡದಲ್ಲಿ ಮೀನು ಹಿಡಿಯುವಷ್ಟು ನಿರ್ಲಕ್ಷ್ಯ ವಹಿಸಿದ ಪುರಸಭೆಯ ಕಾರ್ಯವೈಖರಿಯನ್ನು ಸ್ಥಳೀಯರು ತೀವ್ರವಾಗಿ ಟೀಕಿಸಿದ್ದಾರೆ. ಪ್ರತಿಭಟನೆಯಲ್ಲಿ ಸ್ಥಳೀಯ ರಿಕ್ಷಾ ಚಾಲಕರು, ಸಾರ್ವಜನಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.